ಜೂನ್ ತಿಂಗಳ ಮೊದಲನೆಯ ವಾರದಲ್ಲಿ ಬಿತ್ತನೆ ಮಾಡಿದಂಥ ಒಂದೂವರೆ ತಿಂಗಳ ಬೆಳೆ ಕೊಚ್ಚಿ ಕೊಂಡು ಹೋಗಿದೆ. ರೈತ ಸಮುದಾಯಕ್ಕೆ ಅಪಾರ ನಷ್ಟ ಉಂಟಾಗಿದೆ. ೩೫೦೦ ಕ್ಯೂಸೆಕ್ಸ್ ನೀರು ೧೦ ಗಂಟೆಗಳ ಕಾಲ ಹರಿದಿದೆಯೆಂದರೆ ನಷ್ಟ ಯಾವ ಪ್ರಮಾಣದಲ್ಲಿ ಆಗಿರುತ್ತದೆಂಬುದನ್ನು ಊಹಿಸಿ ಕೊಳ್ಳಬಹುದು. ಆಗಿರತಕ್ಕ ನಷ್ಟವನ್ನು ಕರ್ನಾಟಕ ಸರ್ಕಾರ ಮತ್ತು ಆಂಧ್ರ ಸರ್ಕಾರ ಕೂಡಿಯೇ ಕೊಡಬೇಕಾಗುತ್ತದೆ. ಮಾನ್ಯ ಮಂತ್ರಿಯವರು ಒಮ್ಮೆ ಹೋಗಿ ನೋಡಿಕೊಂಡು ಬಂದು ತಕ್ಕ ಪರಿಹಾರ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ:—ಮಾನ್ಯ ಸದಸ್ಯರು ಹೇಳಿರತಕ್ಕಂಥಾದ್ದು ನಿಜ. ನಾಲೆಗಳ ಕೆಲಸ ಬೋರ್ಡ್ ವ್ಯಾಪ್ತಿಗೆ ಬರುತ್ತದೆ. ಹೊಡೆದು ಹೋದರೆ ರಿಪೇರಿ ಮಾಡುವವರೇ ಅವರೆ ಕೆಲವು ಕಡೆ ಬೆಳೆ ಇಟ್ಟಿಲ್ಲವೆಂದು ಹೇಳಿದ್ದೇನೆ. ಬೆಳೆ ಇಟ್ಟು ನಷ್ಟವಾಗಿದ್ದರೆ, ಬಾವಿಗಳು ಮುಚ್ಚಿ ಕೊಂಡು ಹೋಗಿದ್ದರೆ, ಅನಾಹುತದ ಬಗ್ಗೆ ಸುದೀರ್ಘ ವರದಿಯನ್ನು ತರಿಸಿಕೊಂಡು ಪರಿಹಾರ ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಬೋರ್ಡಿನವರೇ ಎಲ್ಲಾ ರೀತಿಯ ಪರಿಹಾರ ವನ್ನು ಕೊಡಬೇಕಾಗುತ್ತದೆ. ಆ ದಿಸೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

(II) ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದ ಸೂಚನೆ

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಸಂಖ್ಯೆ ೧೮೮ ಸೂಚನೆ ಮೇರೆಗೆ ಕಾವೇರಿ ಜಲ ವಿವಾದಕ್ಕೆ ಸಂಬಂಧಪಟ್ಟಂತೆ ಮಾನ್ಯ ಲೋಕೋಪಯೋಗಿ ಮಂತ್ರಿಯವರ ಗಮನ ಸೆಳೆಯುತ್ತೇನೆ

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—ಕಾವೇರಿ ಜಲ ವಿವಾದವನ್ನು ಪರಸ್ಪರ ಸಂಧಾನದ ಮೂಲಕ ಪರಿಹರಿಸಿಕೊಳ್ಳಬಹುದೆಂಬುದೇ ಕರ್ನಾಟಕದ ನಿಲುವು. ಆದರಂತೆ ಈ ವಿವಾದವನ್ನು ಪರಿಹರಿಸಿಕೊಳ್ಳಲು ೧೯೮೧ರಲ್ಲಿಯೇ ಕರ್ನಾಟಕವು ತನ್ನ ೧೦ ಅಂಶಗಳ ಕಾರ್ಯಕ್ರಮವನ್ನು ಕೇಂದ್ರಕ್ಕೆ ಕಳುಹಿಸಿದೆ. ಈ ದಿಸೆಯಲ್ಲಿಯೇ ತನ್ನ ನಿಲುವನ್ನು ಪ್ರತಿಪಾದಿಸಿಕೊಂಡು ಬಂದಿದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕಾವೇರಿ ಕೊಳ್ಳದ ಮುಖ್ಯ ಮಂತ್ರಿಗಳ ಸಭೆಯಲ್ಲಿ ತಮಿಳು ನಾಡು ಈ ವಿವಾದವನ್ನು ಪಂಚಾಯ್ತಿಗೆ ಒಪ್ಪಿಸಬೇಕೆಂದು ಒತ್ತಾಯಿಸಿತು. ಕರ್ನಾಟಕವು ಪಂಚಾಯ್ತಿಗೆ ಒಪ್ಪಿಸುವುದು ಬೇಡವೆಂತಲೂ ವಾದಿಸಿತು. ಒಪ್ಪಿಸಲೇಬೇಕೆಂದರೆ ಅಂತರ ರಾಜ್ಯ ನದಿಗಳ ನೀರಿನ ಹಂಚಿಕೆಯ ವಿಷಯದಲ್ಲಿ ಮಾರ್ಗಸೂಚಿ ನೀಡುವ ರಾಷ್ಟ್ರೀಯ ಜಲ ನೀತಿ ನಿರೂಪಣೆ ಆಗಿ ಅದಕ್ಕೆ ಲೋಕಸಭೆಯ ಒಪ್ಪಿಗೆಯಾದ ನಂತರ, ಕ್ರಮ ತೆಗೆದುಕೊಳ್ಳಬಹುದೆಂದು ತಿಳಿಸಲಾಯಿತು. ಕೇಂದ್ರ ಜಲ ಸಂಪನ್ಮೂಲ ಸಚಿವರು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಇದೇ ರೀತಿ ಕ್ರಮ ತೆಗೆದುಕೊಳ್ಳಲು ನಮ್ಮ ರಾಜ್ಯದ ನಿಲುವನ್ನು ಪ್ರಧಾನ ಮಂತ್ರಿಯವರಿಗೂ ಸಹ ಭಿನ್ನವಿಸಲಾಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಕಾವೇರಿ ಜಲ ವಿವಾದದ ವಿಚಾರದಲ್ಲಿ ೧೭ನೇ ತಾರೀಖಿನ ಜೂನ್ ೮ರ ಹಿಂದೂಪತ್ರಿಕೆಯಲ್ಲಿ ಸವಿಸ್ತಾರವಾಗಿ ಬಂದಿದೆ. ಕೇಂದ್ರದ ಜಲ ಸಂಪನ್ಮೂಲ ಸಚಿವರು ಸಂಧಾನ ಮುರಿದು ಹೋಯಿತು ಇಂಟರ್‌ಸ್ಟೇಟ್ ರಿವರ್ ಡಿಸ್ಪ್ಯೂಟ್ ಆಕ್ಟ್ ಪ್ರಕಾರ ಪರಿಹಾರ ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಆ ಪತ್ರಿಕಾ ಗೋಷ್ಠಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸಚಿವರ ಹೇಳಿಕೆಯನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆಂದು ಹೇಳಿದ್ದಾರೆ. ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಸಂಧಾನ ದಲ್ಲಿ ಬಗೆಹರಿಸಬೇಕೆನ್ನುವ ವಾದ ಇಟ್ಟಿದ್ದೇವೆಂದು ಪತ್ರಿಕಾಗೋಷ್ಠಿಯಲ್ಲಿ ಹೇಳಬೇಕಾಗಿತ್ತು. ಅವರು ಏತಕ್ಕೆ ಹಾಗೆ ಹೇಳಲಿಲ್ಲ. ರಾಷ್ಟ್ರದ ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಈ ವಿಷಯ ಪ್ರಕಟವಾಗಿದೆ. This is letting down the stand of Karnataka itself by no less a person than the Hon. Chief Minister.

೧೨-೩೦ ಪಿ.ಎಂ.

ಇದರ ಒಂದು ಸ್ಪಷ್ಟೀಕರಣ ಕೊಡಬೇಕು. ನನ್ನ ತಿಳಿವಳಿಕೆ ಪ್ರಕಾರ ಈ ವಿವಾದದ ಸಂಧಾನ ಮಾಡುವಾಗ ಅಡ್ವೋಕೇಟ್ ಜನರಲ್ ಕೂಡ ಅಲ್ಲಿ ಇದ್ದರು. ೧೯೭೪ರ ಅಗ್ರಿಮೆಂಟ್ ಇರುವುದರ ಬಗ್ಗೆ ಅಡ್ವೋಕೇಟ್ ಜನರಲ್ಲರು ಮುಖ್ಯಮಂತ್ರಿಗಳ ಗಮನ ಸೆಳೆದಿರಬೇಕು. ಇದನ್ನು ನೀವು

ಒಪ್ಪುತ್ತಿರೋ ಇಲ್ಲವೋ ಬೇರೆ ಪ್ರಶ್ನೆ. ಆದರೆ ಕಾನೂನಿನ ತೊಡಕುಗಳಿವೆ, ತೊಂದರೆಗಳಿವೆ. ಹಾಗೆ ಇರುವ ತೊಡಕುಗಳು ಸಂಧಾನದ ವೇಳೆಯಲ್ಲಿ ತಿಳಿದುಬಂದಿದ್ದರೆ ಇಂಥ ಪರಿಸ್ಥಿತಿ ಏಕೆ ಉದ್ಭವವಾಗ ಬೇಕು? ಇದರಿಂದ ಕರ್ನಾಟಕದ ಹಕ್ಕಿಗೆ ಚ್ಯುತಿ ತರುವ ಕೆಲಸ ತಮಿಳ್ನಾಡಿನಿಂದ ಆಗಲಿಲ್ಲ, ನಿಮ್ಮ ಮುಖ್ಯಮಂತ್ರಿಗಳಿಂದ ಆಯಿತು ಎಂಬುದನ್ನು ಒಪ್ಪಬೇಕಾಗುತ್ತದೆ. You have to give the clarification. ಎರಡನೆಯದು ೧೯೭೪ರ ಅಗ್ರಿಮೆಂಟಿನಲ್ಲಿ ಕ್ಲಾಸ್ ೧೫ರಲ್ಲಿ ಬಹಳ ಸ್ಪಷ್ಟವಾಗಿದೆ. Arbitration ಆದನ್ನು ಎರಡು ರಾಜ್ಯಗಳೂ ಒಪ್ಪಬೇಕಾಗುತ್ತದೆ. ಒಪ್ಪಿವೆ. ಕೇಂದ್ರ ಸರ್ಕಾರ ಮಧ್ಯೆ ಪ್ರವೇಶ ಮಾಡಿ ಸಂಧಾನ ಮಾಡಬೇಕೆಂದೂ ಆದರಲ್ಲಿ ಇದೆ. ೧೯೭೪ರ ನಂತರ ಕೇಂದ್ರದ ಸಮಕ್ಷಮದಲ್ಲಿ ಸಂಧಾನ ಆಗಬೇಕೆಂದು ಒಪ್ಪಿದ ಮೇಲೆ ಆದನ್ನು ತಾವೂ ಒಪ್ಪಿದ ಹಾಗಾಯಿತು. That means to say you cannot go for a tribunal. ಇವತ್ತು ತಮಿಳ್ನಾಡಿನವರು ಬೇರೆ ತರಹ ಪರಿಹಾರ ಮಾಡಬೇಕೆಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದೇ ಪ್ರತಿಪಾದನೆಯನ್ನು ಸಭೆಯಲ್ಲೂ ನೀವು ಮಾಡಿದ್ದಿರೆಂದು ಹೇಳಬೇಕೋ ಬೇಡವೋ? ನನಗಂತೂ ಅನುಮಾನ ಬರುತ್ತಿದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರು ಈ ತರಹ ಹೇಳುವುದರಿಂದ ಅನುಮಾನ. ಇದಕ್ಕೆ ಸ್ಪಷ್ಟೀಕರಣ ಬೇಕು. ಇನ್ನೊಂದು, ಇಲ್ಲಿ ಮಾತುಕತೆ ಆದ ಮೇಲೆ ತಮಿಳ್ನಾಡಿನವರು ಅಲ್ಲಿಗೆ ಹೋಗಿ ಅಲ್ಲಿ ಕ್ಯಾಬಿನೆಟ್ ಡಿಸಿಷನ್ ಮಾಡಿ ಇದನ್ನು ಟ್ರಿಬ್ಯೂನಲ್‌ಗೆ ಒಪ್ಪಿಸಬೇಕೆಂದು ಪತ್ರಿಕಾ ಪ್ರಕಟಣೆ ಕೂಡ ಮಾಡಿದ್ದಾರೆ. ಆದರೆ ನಿಮ್ಮ ಸರ್ಕಾರ ಇದನ್ನು ಸಂಧಾನದ ಮೂಲಕ ಮಾಡುವಂತೆ ನಿರ್ಧಾರ ತಿಳಿಸುವ ಪ್ರಕಟಣೆ ಇವತ್ತಿನವರೆಗೂ ಪತ್ರಿಕೆಯಲ್ಲಿ ಬಂದಿಲ್ಲ. ಇದನ್ನು ತಾವು ಈ ಸಭೆಗೆ ತಿಳಿಸಬೇಕು. What is the stand of our Government as against the stand of the Tamilnadu Government? ದಯವಿಟ್ಟು ಪ್ರಧಾನಿಯವರಿಗೆ ಏನೆಂದು ಬರೆದಿದ್ದೀರಿ ಹೇಳಬೇಕು. You will have to place it before this House. ಇಲ್ಲದಿದ್ದರೆ ಕರ್ನಾಟಕದ ಜನರಲ್ಲಿ ಈ ಸದನದ ಸದಸ್ಯರಲ್ಲಿ ಬಹಳ ಅನುಮಾನ ಉಳಿಯುತ್ತದೆ. ಏಕೆಂದರೆ ತೆಲುಗು ಗಂಗಾ ವಿಚಾರ ಇರಲಿ, ಬೆಳಗಾಂ ಗಡಿ ಪ್ರಶ್ನೆ ಇರಲಿ, ಕಾವೇರಿ ಇರಲಿ ಯಾವುದರಲ್ಲೇ ಆದರೂ ಒಂದು ರೀತಿಯ ಸಡಿಲ ರೀತಿಯ ಅಪ್ರೋಚ್ ಕಂಡುಬರುತ್ತಿದೆ. ನಿಮ್ಮ ದೃಢ ನಿಲುವಿನಲ್ಲಿ ಕುಸಿತ ಕಾಣುತ್ತಿದೆ. ಇದರಿಂದ ಕರ್ನಾಟಕಕ್ಕೆ ಹಿತ ವಾಗುವುದಿಲ್ಲ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಶ್ರೀ ಮೊಯಿಲಿಯವರು ಕೆಲವು ವಿವರ ಕೇಳಿದ್ದಾರೆ. ಅವರ ಮನಸ್ಸಿನಲ್ಲಿರುವ ಸಂಶಯ ನಿವಾರಣೆ ಮಾಡುವುದು ನನ್ನ ಜವಾಬ್ದಾರಿ. ೧೯೭೪ರ ಕರಾರು ಮುಗಿದುಹೋದ ಮೇಲೆ ಕರ್ನಾಟಕದ ನಿಲುವು ಕಾವೇರಿ ಜಲ ವಿವಾದದ ಬಗ್ಗೆ ಮೊದಲಿನಿಂದ ಈಚೆಗೆ ಬಂದ ಎಲ್ಲಾ ಸರ್ಕಾರಗಳದ್ದೂ ಒಂದೇ ಸಮನಾದದ್ದು. ಯಾವ ವ್ಯತ್ಯಾಸವೂ ಇದರಲ್ಲಿ ಇಲ್ಲ. ಇದರಲ್ಲಿ ಗುಂಡೂರಾಯರು, ದೇವರಾಜ ಅರಸರು, ಹೆಗಡೆಯವರು ಎನ್ನುವ ಪ್ರಶ್ನೆಯೇ ಇಲ್ಲ. ಇದು ಮೊದಲಿನದು. ಎರಡನೆಯದು, ಇಪತ್ತು inter-state river dispute Act ವ್ಯಾಪ್ತಿಯಲ್ಲಿ ಇದನ್ನು ಪಂಚಾಯಿತಿಗೆ ಒಪ್ಪಿಸಬೇಕೆಂದು ಒಂದು ಹೇಳಿಕೆ ಹಿಂದೂ ಪತ್ರಿಕೆಯಲ್ಲಿ ಬಂದಿದೆ ಎಂದರು. ಅದನ್ನು ನಾನೂ ಓದಿದ್ದೇನೆ. ಆದರೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕು. ಈ ದೇಶದ ಯಾವುದೇ ನದಿ ನೀರಿನ ವಿವಾದದ ಬಗ್ಗೆ ಆಗಿರುವ ತೀರ್ಮಾನಗಳ ಇತಿಹಾಸವೇ ಬೇರೆ, ಕಾವೇರಿ ನೀರಿನ ತೀರ್ಮಾನದ ಇತಿಹಾಸದ ದೌರ್ಭಾಗ್ಯವೇ ಬೇರೆ. ಕಾವೇರಿ ನದಿಗೆ ಸಂಬಂಧಪಟ್ಟಂತೆ ಒಂದು ಒಪ್ಪಂದ ಹಿಂದಿನ ಹಳೆಯ ಮದ್ರಾಸ್ ಸರ್ಕಾರಕ್ಕೂ ಮತ್ತು ಹಿಂದಿನ ಹಳೆಯ ಮೈಸೂರು ಸರ್ಕಾರಕ್ಕೂ ಆಗಿತ್ತು. ಇಂಥ ಒಪ್ಪಂದದ ಕರಾರುಗಳು ಈ ರಾಷ್ಟ್ರದ ಯಾವುದೇ ಅಂತರರಾಜ್ಯ ನದಿಗಳ ವಿಷಯದಲ್ಲಿ ಆಗಿಲ್ಲ. ಆದ್ದರಿಂದ ಈ ವಿಷಯವನ್ನು ಕೇವಲ ಇಂಟರ್‌ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆಕ್ಟ್‌ನ ವ್ಯಾಪ್ತಿಯಲ್ಲಿ ಪ್ರಯತ್ನ ಮಾಡಿದೆ ಮಾಡ ಬೇಕೆಂಬ ವಾದ ಏನಿದೆ ಅದು ಕೇವಲ ಕಾಂಪನೆಂಟ್ ಆಷ್ಟೇ. ಆದ್ದರಿಂದ ಇವತ್ತೇನಾಗಿದೆ ಎಂದರೆ ಈ ಕರಾರಿನ ಹೆಸರಿನಲ್ಲಿ ಈ ರಾಜ್ಯಕ್ಕೆ ಆದಂಥ ಅನ್ಯಾಯದ ಬಗ್ಗೆ ಈ ರಾಷ್ಟ್ರದ ಯಾವ ಪ್ರಜೆಯಾದರೂ ಯೋಚನೆ ಮಾಡಬೇಕಾಗುತ್ತದೆ. ಇದು ಬರೀ ಕರ್ನಾಟಕಕ್ಕೆ ಸಂಬಂಧಿಸಿದ ವಿಷಯವಲ್ಲ. ಇಡೀ ಹಿಂದೂಸ್ಥಾನದಲ್ಲೇ ಏನು ಒಂದು ತಪ್ಪು ಕಲ್ಪನೆ ಮೂಡಿಬಿಟ್ಟಿದೆ ಎಂದರೆ ಕರ್ನಾಟಕದವರು ಏನೋ ಜಲಾಶಯಗಳೆಲ್ಲದರಲ್ಲಿ ನೀರನ್ನು ಹಿಡಿದಿಟ್ಟುಕೊಂಡಿದ್ದಾರೆ ಎನ್ನುವ ತಪ್ಪು ಅಭಿಪ್ರಾಯ ಮೂಡಿರು ವುದರ ಜೊತೆಗೆ ಕರ್ನಾಟಕದ ಮೇಲೆ ಅಪಕೀರ್ತಿ ತರುವ ಪ್ರಯತ್ನವೂ ನಡೆಯುತ್ತಿದೆ. ನಾವು ಕೇವಲ

ಸಂವಾರು ೧೦೦ರಲ್ಲಿ ಳಿಲೆ ಅಂಶ ನೀರನ್ನು ನಮ್ಮ ರಾಜ್ಯದಿಂದ ಕೊಡುತ್ತೇವೆ. ದುರ್ದೈವವಶಾತ್ ೩೨ ಲಕ್ಷ ಎಕರೆಗೆ ನೀರನ್ನು ಒಗಿಸುತ್ತಿದ್ದೇವೆ. ಕೇವಲ ೬ ಲಕ್ಷ ಎಕರೆ ಕೂಡ ನಾವು ನೀರಾವರಿ ಮಾಡಿಕೊಳ್ಳಲಾಗಿಲ್ಲ. ಇದಕ್ಕೆ ನಾನಾ ಕಾರಣಗಳಿವೆ. ಈ ವಿಷಯದ ಬಗ್ಗೆ ರಾಷ್ಟ್ರೀಯ ಜಲನೀತಿ ತೀರ್ಮಾನವಾಗಬೇಕಾಗಿದೆಯೋ ಏನೋ ಅದು ಆಗುವುದಕ್ಕಿಂತ ಮುಂಚೆ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರ ತನ್ನ ನಿಲುವನ್ನು ಹೇಳಬಾರದೆಂದು ಹೇಳಿದ್ದೇವೆ. ರಾಷ್ಟ್ರೀಯ ಜಲನೀತಿ ನಿರೂಪಣೆ ಆದ ಮೇಲೆ ಅದಕ್ಕೆ ಕಾನೂನಿನ ಶಕ್ತಿ ಗಳಿಸಿಕೊಂಡ ಮೇಲೆ ಈ ಸಮಸ್ಯೆ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕದೆಂಬ ಮಾತನ್ನೂ ಹೇಳಿದ್ದೇವೆ. ಇದು ನಮ್ಮ ಪ್ರತಿಪಾದನೆ. ನಮ್ಮ ನಿಲುವು. ಮಾನ್ಯ ಹೆಗಡೆಯವರ ಸರ್ಕಾರದ ನಿಲುವು ಇದು ಎಂದೂ ಇಲ್ಲ. ಶ್ರೀಮಾನ್ ಹೆಚ್. ಎಂ. ಚೆನ್ನಬಸಪ್ಪನವರು ನೀರಾವರಿ ಸಲಹಾ ಮಂಡಲಿ ಅಧ್ಯಕ್ಷರಾಗಿದ್ದಾಗಲೂ ಇದೇ ನಿಲುವು ಇತ್ತು. ತಮಿಳುನಾಡಿನ ನೀರಾವರಿ ಮಂತ್ರಿಗಳ ಹೇಳಿಕೆಯನ್ನು ನೋಡಿದ್ದೇವೆ, ಮುಖ್ಯಮಂತ್ರಿಗಳ ಹೇಳಿಕೆಯನ್ನೂ ನೋಡಿದ್ದೇವೆ. ಈಗ ಅದರ ಬಗ್ಗೆ ಇಷ್ಟೇ ಹೇಳುತ್ತೇನೆ, ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬರಲಿ ಕರ್ನಾಟಕ ಒಂದಲ್ಲ ಒಂದು ರೀತಿಯಲ್ಲಿ ವಂಚನೆಗೆ ಒಳಗಾಗಿದೆ. ಎಂಥೆಂಥಾ ನಾಯಕರು ಇದ್ದ ಕಾಲದಲ್ಲೇ ನ್ಯಾಯ ದೊರಕಿಸಿಕೊಳ್ಳುವುದಕ್ಕೆ ಆಗಲಿಲ್ಲ. ಅವಿಭಾಜ್ಯ ಕಾಂಗ್ರೆಸ್ ಇದ್ದಾಗಲೂ ಆಷ್ಟೇ. Central Water Power Commission ನಲ್ಲಿ ತಮಿಳ್ನಾಡಿನವರೇ ಬಹಳ ಇದ್ದಾರೆ. It is unfortunate for Karnataka. Even though we have got eminent engineers, we are unable to get any representation in that Commission. ಅಲ್ಲಿ ಕುಳಿತಿರುವ ವ್ಯಕ್ತಿಗಳು ಆ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವ ಪ್ರಯತ್ನ ಮಾಡುತ್ತಿದ್ದಾರೆ. ನಾನು ಈಗ ಮಂತ್ರಿಯಾಗಿದ್ದೇನೆ, ವಿರೋಧ ಪಕ್ಷದಲ್ಲಿದ್ದಾಗಲೂ ಇದನ್ನು ಹೇಳಿದ್ದೇನೆ. ಈ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯವನ್ನು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಈ ಜಲ ನೀತಿ ಸಂಪೂರ್ಣ ನಿರೂಪಣೆ ಆಗುವವರೆಗೆ ಪ್ರಧಾನ ಮಂತ್ರಿಗಳು ಯಾವ ನಿಲುವನ್ನೂ ತೆಗೆದುಕೊಳ್ಳುವುದಿಲ್ಲ ಎಂಬ ವಿಶ್ವಾಸ ನನಗಿದೆ. ಅದೇ ರೀತಿ ಒತ್ತಾಯ ಮಾಡಿದ್ದೇವೆ. ಇವೊತ್ತು ನಮ್ಮ ನಿಲುವಿನಲ್ಲಿ ಹಿಂದಿನ ನಿಲುವಿಗಿಂತ ಬೇರೆ ಬದಲಾವಣೆ ಇಲ್ಲವೆಂದು ಹೇಳುತ್ತಾ, ಇನ್ನೂ ಒಂದು ಮಾತು ಹೇಳುತ್ತೇನೆ. ತಮಿಳ್ನಾಡಿನ ನಮ್ಮ ಸಹೋದ್ಯರು ಮತ್ತು ನಾವು ಕೂಡಿ ನಮ್ಮ ಪರಸ್ಪರ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳೋಣ. ಈ ಸದನದ ಮೂಲಕ ಅವರಿಗೆ ಕರೆ ಕೊಡುತ್ತಿದ್ದೇನೆ. ಅವರ ಯಾವ ಭೂ ಪ್ರದೇಶಗಳಲ್ಲಿ ಇವತ್ತು ನೀರಾವರಿ ವ್ಯವಸ್ಥೆ ಆಗಿದೆಯೋ ಅದೇ ರೀತಿ ನಮ್ಮ ರಾಜ್ಯದಲ್ಲಿ ಮಾಡುವುದಕ್ಕೆ ಎಲ್ಲಾ ಪ್ರಯತ್ನ ಮಾಡಿದ್ದೇವೆ. ಈ ಎರಡು ರಾಜ್ಯಗಳ ಹಿತ ಕಾಪಾಡುವುದರಲ್ಲಿ ಆಧುನಿಕವಾದ ನೀರಾವರಿ ಮತ್ತು ಆಧುನಿಕವಾದ ವ್ಯವಸಾಯದ ನೀತಿ ಮತ್ತು ಭೂಮಿಯಲ್ಲಿ ಇರುವ ಅಂತರ್ಜಲದ ಬಳಕೆ ಇವುಗಳನ್ನೆಲ್ಲಾ ಮಾಡಿದಾಗ ನಮಗೆ ಮನಸ್ಸಿದ್ದರೆ ಮಾರ್ಗ ಇದೆ. ಇವೊತ್ತು ಅವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಇದರಲ್ಲಿ ಕೇವಲ ಹಠಪಾರಿತನ ಬೇಡ. ಬೇಕಾದರೆ ಮತ್ತೊಮ್ಮೆ ಸಂಧಾನದ ಪ್ರಯತ್ನ ಮಾಡುತ್ತೇವೆ ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ.

ಈ ಹಂತದಲ್ಲೂ ಯಾವುದಾದರೂ ಒಂದು ನಿರ್ಧಾರಕ್ಕೆ ಬರಲಿಕ್ಕೆ ಸಾಧ್ಯವೆಂದು ಸದ್ಭಾವನೆಯಿಂದ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಮಿಳ್ನಾಡಿನ ಸಹೋದ್ಯರು ಸಹಕರಿಸಲಿ. ಹಾಗೂ ಸರ್ಕಾರದ ನೀರಾವರಿ ನೀತಿಯಲ್ಲಿ ಯಾವುದೇ ಬದಲಾವಣೆ ಇಲ್ಲವೆಂದು ಸ್ಪಷ್ಟೀಕರಣ ಮಾಡಲಿಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲವೆಂದು ಹೇಳುವಂಥಾದ್ದು ಸ್ವಾಗತಾರ್ಹ, ಆದರೆ ನಿಮ್ಮ ನಿಲುವಿನಲ್ಲಿ ಒಂದು ರೀತಿಯ ಸಡಿಲ ಧೋರಣೆ ಇದೆ ಎನ್ನುವುದು ಸಾರ್ವಜನಿಕ ಅಭಿಪ್ರಾಯವಾಗಿದೆ. ಪತ್ರಿಕೆಗಳಲ್ಲೂ ಇದು ಸ್ಪಷ್ಟವಾಗಿದೆ ನಾನೂ ಕೇಳಿದ್ದೇನೆ ಈ ಸದನದಲ್ಲಿ ಈಗ ಆ ರೀತಿ ಇಲ್ಲವೆಂದು ಹೇಳಿದ್ದಾರೆ. ತಮಿಳುನಾಡು ಸರ್ಕಾರ ತನ್ನ ಸಚಿವ ಸಂಪುಟದ ನಿರ್ಣಯ ಮಾಡಿಕೊಂಡು ಕಾವೇರಿ ವಾಟರ್ ಡಿಸ್‌ಪ್ಯೂಟ್ ಅನ್ನು ಟ್ರಿಬ್ಯುನಲ್‌ಗೆ ಒಪ್ಪಿಸಬೇಕೆಂದು ಬಹಳ ಕಿಡಿಕಾರತಕ್ಕ ನಿರ್ಣಯ ತೆಗೆದುಕೊಂಡಿದ್ದಾರೆ. ೧೯೭೪ನೇ ಇಸವಿಯಿಂದ ಪೊನ್ನೆ ಮೊನ್ನೆಯವರೆಗೂ ಇವರು ಸೇರುವವರೆಗೂ ಕೂಡ ಇಂತಹ ಧೋರಣೆಯನ್ನು ತಮಿಳುನಾಡು ಸರ್ಕಾರ ತೆಗೆದುಕೊಂಡದ್ದು ಇಲ್ಲ. ಬದಲಾದ ತಮಿಳುನಾಡು ಧೋರಣೆಯಿಂದ ಉದ್ಭವವಾದಂತಹ ಈ ಪ್ರಶ್ನೆಯನ್ನು ಕೇಂದ್ರ ಸಚಿವರು ಬಹುಶಃ ಮಾನ್ಯ ಮುಖ್ಯ ಮಂತ್ರಿಯವರು ಒಪ್ಪಿ ಹೇಳಿರಬಹುದು. ಇದರ ಬಗ್ಗೆ ತಾವು ಸ್ಪಷ್ಟೀಕರಣ ಮಾಡಲಿಲ್ಲ. You have become a party to it. Inter State River dispute Act, ಪ್ರಕಾರ ಮಾಡಬೇಕೆಂದು

ಹೇಳಿದರೆ ಸಂಧಾನ ಮುಗಿದು ಹೋಯಿತೆ ? ತಮಿಳು ನಾಡಿನವರು ಹೇಳತಕ್ಕದ್ದು ಒಂದು. ಆದರೆ ಇವತ್ತು ಕೇಂದ್ರ ಸಚಿವರು ಮತ್ತು ಮುಖ್ಯಮಂತ್ರಿಗಳ ಸಂಧಾನ ಮುರಿದು ಹೋದದ್ದರಿಂದ, ಇಂಟರ್ ರಿವರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಇದನ್ನು ಪರಿಹಾರ ಮಾಡಬೇಕೆಂದು ಬಂದಾಗ ಏನು ಅರ್ಥ ವಾಯಿತು ? ಅದರ ಬಗ್ಗೆ ಸ್ಪಷ್ಟೀಕರಣ ಬೇಕು. what is your stand ? ಏಕೆಂದರೆ ೧೯೭೪ ರಿಂದ ಇವತ್ತಿನವರೆಗೆ ಸ್ಟ್ಯಾಂಡ್ ಏನಿತ್ತು ಅದು ಬದಲಾವಣೆಯಾಗಿಲ್ಲ. ಈ ಬದಲಾವಣೆಯಾದ ವಿಷಯವನ್ನು ತಾವು ಸಚಿವ ಸಂಪುಟದಲ್ಲಿ ಚರ್ಚೆ ಮಾಡಿದ್ದೀರಿ ಅದರ ಯುಕ್ತಾ ಯುಕ್ತತೆ ಕಾನೂನಿನ ಒಂದು ತೊಡಕನ್ನು ಪರಿಹಾರ ಮಾಡಲಿಕ್ಕೆ ತಾವು ಮಾನ್ಯ ಪ್ರಧಾನ ಮಂತ್ರಿಗಳವರಿಗೆ ಕಾಗದದ ಮೂಲಕ ಭಿನ್ನವಿಸಲಾಗಿದೆ ಎಂದು ಹೇಳಿದರೆ ಹೇಗೆ ? ಸದನದ ಮೂಲಕ ಭಿನ್ನವಿಸುವುದು ತಾವು ಬಾಯಿಮಾತಿನ ಮೂಲಕ ಭಿನ್ನವಿಸುವುದು ನಮಗೆ ಬೇಕಾಗಿಲ್ಲ. ಸಂಧಾನ ಯಾವ ರೀತಿ ಮುರಿದು ಹೋಯಿತು ಎಂದು ತಮಿಳುನಾಡಿನವರು ಜಾಹಿರಾತು ಮಾಡಿದ್ದಾರೆ ಅದಕ್ಕೆ ವಿರುದ್ದವಾಗಿ ಕರ್ನಾಟಕ ಸರ್ಕಾರ ತನ್ನ ಸ್ಪಷ್ಟವಾದ ನಿಲುವನ್ನು ಪ್ರಧಾನ ಮಂತ್ರಿಯವರಿಗೆ ಮತ್ತು ಕೇಂದ್ರ ಜಲ ಸಂಪನ್ಮೂಲನ ಸಚಿವರಿಗೆ ತಿಳಿಸಿದರೆ ಸಂಧಾನ ಮುರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ತಮಿಳುನಾಡಿನವರು ಏನೇ ಹೇಳಿಕೊಂಡರು ೧೯೭೪ರ ಒಪ್ಪಂದದ ಪ್ರಕಾರ ಇವೊತ್ತು ಕೂಡ ಸಂಧಾನ ಮಾಡಬೇಕಾಗಿದೆ ಅದನ್ನು ತಾವು ಸ್ಪಷ್ಟವಾಗಿ ತಿಳಿಸಿದ್ದೀರಾ? ಅದರ ಬಗ್ಗೆ ತಾವು ಇವತ್ತು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಹೆಚ್.ಡಿ. ದೇವೇಗೌಡ.— ಮಾನ್ಯ ವೀರಪ್ಪ ಮೊಯಿಲಿಯವರು ಏನು ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ನಿರ್ಣಯ ಮಾಡಬೇಕೆಂದು ತಮಿಳುನಾಡು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವಾಗಿದೆಯೆಂದು ಹೇಳುತ್ತಿದ್ದಾರೆ ಅದು ಇತ್ತೀಚೆಗೆ ಆಗಿದ್ದು. ಹಿಂದೆಯೂ ಆಗಿಲ್ಲ ವೆಂದು ಹೇಳಿದ್ದಾರೆ ಅದು ಹೌದು. ಇತ್ತೀಚೆಗೆ ಅವರು ಸಚಿವ ಸಂಪುಟ ನಿರ್ಣಯಮಾಡಿದ್ದಾರೆ. ಇಲ್ಲಿ ನಮ್ಮ ನಿಲುವನ್ನು ಸಮರ್ಥನೆ ಮಾಡಿಕೊಳ್ಳುವಾಗ ಅವರಿಗೆ ಬಹುಶಃ ಅನಿಸಿರಬೇಕು ನಾವು ಈ ದಿಕ್ಕಿನಲ್ಲಿ thourgh bilateral talksನಿಂದ ಉಪಯೋಗವಾಗುವುದಿಲ್ಲವೆಂದು ನಿರ್ಣಯ ಮಾಡಿರಬಹುದು ಎಂದು. ಆದರೆ ನಿಲುವನ್ನು ನಾವು ಹೇಳುತ್ತಿದ್ದೇವೆ. ಮಾತುಕತೆಯು ಮೂಲಕ ಕೇಂದ್ರ ಸರ್ಕಾರ ಮತ್ತು ಪ್ರಧಾನ ಮಂತ್ರಿಯವರನ್ನು ರಿಕ್ವೆಸ್ಟ್ ಮಾಡಿದ್ದೇವೆಂದು ಹೇಳುತ್ತಿದ್ದೇನೆ. ಮತ್ತೊಂದು ವಿಷಯ ಎಂದರೆ ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ನಿರ್ಣಯ ಆಗ ತಕ್ಕದ್ದು ಕೇಂದ್ರದ ಜಲಸಂಪನ್ಮೂಲ ಸಚಿವರು ಹೇಳಿರತಕ್ಕದ್ದು, ನಮ್ಮ ಮುಖ್ಯಮಂತ್ರಿಗಳು ಹೇಳಿರತಕ್ಕದ್ದುದ್ದು, ಎಲ್ಲ ನನ್ನ ಕಛೇರಿಯಲ್ಲಿದೆ. ಪೇಪರ್ಸ್ ಕಟಿಂಗ್ಸ್ ಇದೆ, ಬೇಕಾದರೆ ತರಿಸುತ್ತೇನೆ ಇಷ್ಟು ಹೇಳುತ್ತೇನೆ, ಅಂತಿಮವಾಗಿ ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಜಲ ನೀತಿಯನ್ನು ನಿರೂಪಣೆ ಮಾಡಿದ ಮೇಲೆ ಇರತಕ್ಕ ಕಾಯಿದೆಯ ವ್ಯಾಪ್ತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಬಹುದು. ಇಲ್ಲದಿದ್ದರೆ ಇರತಕ್ಕ ಕಾಯಿದೆಯನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಅದರ ಪ್ರಕಾರ ಹೇಳಿದ್ದೇನೆ. ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆಕ್ಟ್‌ನ್ನು ಬದಲಾವಣೆ ಮಾಡ ತಕ್ಕ ಅಧಿಕಾರ ಕೇಂದ್ರಕ್ಕೆ ಇದೆ ಎನ್ನತಕ್ಕ ಮಾತನ್ನು ಹೇಳಿದ್ದೇನೆ. ನಾನು ಇವತ್ತು ಒಪ್ಪಿಕೊಳ್ಳುತ್ತೇನೆ. ಅದರಲ್ಲೇನು ವ್ಯತ್ಯಾಸವಿಲ್ಲ. If there is any amendment necessary after formulating the water policy, the nthey have to go before the parliament and the amendment should be brought. ತಿದ್ದುಪಡಿಯ ಪ್ರಕಾರ ಕಾನೂನಿನ ಚೌಕಟ್ಟಿನಲ್ಲಿ ಕಾನೂನು ಮಾಡಬೇಕಾಗುತ್ತದೆ. ಭಿನ್ನ ಭೇದ ಕಂಡುಹಿಡಿಯ ಬೇಕಾದ್ದುಇಲ್ಲ, ಇಷ್ಟು ಹೇಳುತ್ತೇನೆ, ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆಕ್ಟ್ ಏನಿದೆ, ಹಾಲಿ ಕಾಯಿದೆ ತಿದ್ದುಪಡಿ ಮಾಡತಕ್ಕ ಕಾಯಿದೆಯ ಅದರ ವ್ಯಾಪ್ತಿಯಲ್ಲಿ ವಿಷಯವನ್ನು ಬಗೆಹರಿಸುವುದಕ್ಕೆ ಮುಂಚೆ ಈ ರಾಜ್ಯಕ್ಕೆ ಆಗಿರತಕ್ಕ ಅನ್ಯಾಯದ ಬಗ್ಗೆ ಪ್ರಧಾನ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳುತ್ತಾರೆಂದುನಾನು ಆಶಿಸುತ್ತೇನೆ. ಸುದೀರ್ಘವಾದ ಪತ್ರವನ್ನು ಬರೆದಿದ್ದೇವೆ. ತಾವೇನು ಕೇಳಿದ್ದೀರಿ ಅದನ್ನು ಸಭೆಯ ಮುಂದೆ ಇಡುತ್ತೇನೆ. ಇಂಥಿಥ ಕಾರಣದಿಂದ ವಾಟರ್ ಆಗುವವರೆಗೆ ಈ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳುವುದು ಬೇಡವೆಂದು ಹೇಳಿದ್ದೇವೆ. ಬಹುಶಃ ನಾಳೆ ನಮ್ಮ ರಾಜ್ಯದ ಎಲ್ಲಾ ಲೋಕಸಭಾ ಸದಸ್ಯರುಗಳು ಪ್ರಧಾನಮಂತ್ರಿಗಳನ್ನು ಭೇಟಿ ಮಾಡುವವರು ಇದ್ದಾರೆ. ನಾನು ಕೂಡ ಸಮಾ ಲೋಚನೆ ಮಾಡಿದ್ದೇನೆ, ಅವರಿಗೆ ಮನವಿ ಪತ್ರ ಸಲ್ಲಿಸಲಾಗಿದೆ. ಯಾವುದೇ ಇಂತಹ ಮಹತ್ವದ ನಿರ್ಣಯದ ಬಗ್ಗೆ ತಮ್ಮ ವಿಶ್ವಾಸವನ್ನು ತೆಗೆದುಕೊಳ್ಳುತ್ತೇವೆ. ಆ ರೀತಿ ಮುಂದುವರಿಯುತ್ತೇವೆ ಇದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಈ ಸಂದರ್ಭದಲ್ಲಿ ಒಂದು ಸ್ಪಷ್ಟೀಕರಣ ಮಾಡಬೇಕಾಗುತ್ತದೆ, ನಮ್ಮ ರಾಜ್ಯದಲ್ಲಿ ೬ ಲಕ್ಷ ಹೆಕ್ಟೇರ್ ಪ್ರದೇಶ ನೀರಾವರಿಯಾಗುತ್ತಿದೆ ಎಂದು ಹೇಳಿದ್ದೆ, ಅದು ೧೦ ಲಕ್ಷ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಏಕೋ ನಮ್ಮ ಮಾನ್ಯ ಸಚಿವರು ಬಹಳ ಹಾರಿಕೆಯ ಉತ್ತರ ಕೊಡುತ್ತಿದ್ದಾರೆ. ಅಫ್‌ಕೋರ್ಸ್ ಅವರು ಮುಖ್ಯ ಮಂತ್ರಿಗಳನ್ನು ಎಂಬಾರಸ್ ಮೇಂಟಿಗೆ ಸಿಕ್ಕಿಸಬಾರದೆಂದು ಇರಬಹುದು ಆ ಸಂಗತಿ ಪ್ರತ್ಯೇಕ. ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಾವು ಹೇಳಲಿಲ್ಲ. If the Hon. Chief Minister has embarassed us pleasc let us know. You take us into confidence. ಅದನ್ನು ತಾವು ತಾವು ಯಾವಾಗಲೂ ಮಾಡಬಹುದು. ಮಾನ್ಯ ಮುಖ್ಯಮಂತ್ರಿಗಳು ಹೇಳಲಿಲ್ಲ ಎನ್ನುವುದನ್ನು ಅದನ್ನೇ ತಾವು ಸರಿಯಾಗಿ ಹೇಳಲಿಲ್ಲ. I must say that the Hon. Chief Minister has embarassed in this matter. I can understand this style. ಅದನ್ನು ಇಪ್ಪೊತ್ತು ಕೂಡ ಪುನಃ ತಾವು ಮಾನ್ಯ ಪ್ರಧಾನ ಮಂತ್ರಿಗಳಿಗೆ ಕೇಂದ್ರದ ಜಲ ಸಂಪನ್ಮೂಲ ಸಚಿವರಿಗೆ ತಾವು ದಯಮಾಡಿ ಹೇಳಬೇಕಾಗುತ್ತದೆ. ನನಗೆ ಒಂದು ಅರ್ಥವಾಗುವುದಿಲ್ಲ ಏಕೆಂದರೆ ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷದ ಸರ್ಕಾರಗಳು ಇದ್ದಾಗ I am just raising a point. You will have to realise and rethink yourself. ಇಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಮೊರೆ ಹೋಗತಕ್ಕಂಥದ್ದು ಇದೆ. ಇಲ್ಲಿ ತಮ್ಮ ಪಕ್ಷದ ಸರ್ಕಾರವಿದೆ ಕೇಂದ್ರದಲ್ಲಿ ನಮ್ಮ ಪಕ್ಷದ ಸರ್ಕಾರವಿದೆ. ಇವತ್ತು ತಾವೇ ಹೇಳಿದ್ದೀರಿ, ಮಾನ್ಯ ಮುಖ್ಯ ಮಂತ್ರಿಗಳು ಏಕಾ ಏಕಿ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ನಮಗೆ ಕೇಂದ್ರ ಸರ್ಕಾರದ ಹಸ್ತಕ್ಷೇಪ ಬೇಕಾಗಿಲ್ಲ. ನಾವು ನಮ್ಮ ರಾಜ್ಯದ ನೆರೆ ಹೊರೆಯ ರಾಜ್ಯಗಳೊಂದಿಗೆ ನಮ್ಮ ಸಮಸ್ಯೆಗಳನ್ನು ನಾವೇ ಪರಿಹಾರ ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ, ಇದೊಂದು ನಮಗೆ ಅರ್ಥವಾಗುವುದಿಲ್ಲ. Inter State Dispute between Tamil Nadu and Karnataka, Andhra and Karnataka ಈ ಎಲ್ಲಾ ಇಷ್ಯೂಗಳನ್ನು ಬಗೆಹರಿಸಿಕೊಳ್ಳುವಾಗ ಅವರು ಮಾತುಕತೆಗಳು ಮುರಿದು ಹೋಗತಕ್ಕ ಪರಿಸ್ಥಿತಿ ಏತಕ್ಕೆ ಬಂತು ? ಇವರು ಫ್ರಾಂಕಾಗಿ ಡಿಸ್‌ಕಷನ್ ಮಾಡುತ್ತಾ ಇರುವಾಗ ಅವರ ಮಾತುಕತೆಗೆ ಎಲ್ಲಿ ಕೊರತೆಯಾಗಿದೆ ? ಎಲ್ಲಿ ತೊಂದರೆಯಾಗಿದೆ ? Does it not reflect the failure on the part of the State Government to properly and effectively negotiate with the neighbouring State ? ೧೯೭೪ರಿಂದ ಇಪ್ಪೊತ್ತಿನವರೆಗೂ ಅವರ ಮಾತುಕತೆ ಮುರಿದು ಹೋಗಿಲ್ಲ. ಆಂಧ್ರ ಪ್ರದೇಶದ ಜೊತೆಗೆ ಮಾತುಕತೆ ನಡೆದಾಗ ಕೇಂದ್ರ ಸರ್ಕಾರದ ಸಹಾಯ ಕೇಳತಕ್ಕ ಪರಿಸ್ಥಿತಿ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಆಗಲಿಲ್ಲ. Does it not reflect the weakness in some areas ? ಇದು ಏತಕ್ಕೆ ಆಯಿತು ? ತಾವು ಹಿರಿಯ ಸಚಿವರು, ಇದರ ಬಗ್ಗೆ ತಮ್ಮ ದೃಷ್ಟಿಯನ್ನು ಈ ಕಡೆ ಹರಿಸಬೇಕು. ಇಂಟರ್ ಸ್ಟೇಟ್ ರಿವರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಬಿಚ್ಚುಮನಸ್ಸಿನಿಂದ ಕರ್ನಾಟಕ ರಾಜ್ಯದ ಹಿತಾಸಕ್ತಿಯನ್ನು ವಿಚಾರ ಮಾಡತಕ್ಕಂಥಹ ಒಂದು ಪರಿಣಾಮದ ದೃಷ್ಟಿಯಿಂದ ತಮ್ಮ ಕೆಲಸಕ್ಕೆ ಅಧಿಕಾರದ ಕೊರತೆ ಇದ್ದರೆ ನಾವು ಮುಖ್ಯಮಂತ್ರಿಗಳಿಗೆ ಈ ಸಭೆಯ ಮುಖಾಂತರ ಹೇಳೋಣ. ಪರಿಹಾರ ಮಾಡತಕ್ಕ ಎಲ್ಲಾ ಅಧಿಕಾರವನ್ನು ಮಾನ್ಯ ದೇವೇಗೌಡರಿಗೆ ಕೊಡಲಿ. We can scrutinise and pass a resolution. ಏಕೆಂದರೆ ಪಾಪ ಅವರು ಮುಖ್ಯ ಮಂತ್ರಿಗಳನ್ನೂ ಡಿಫೆಂಡ್ ಮಾಡಿಕೊಳ್ಳುವುದರ ಜೊತೆಗೆ ಸ್ವಲ್ಪ ಅನುಮಾನದಲ್ಲೇ ಮಾತನಾಡಿ ಹಾರಿಕೆ ಉತ್ತರ ಕೊಡುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ತಾವು ಏಕೆ ಎಂಬರ್ಯಾಸ್ ಮಾಡಬೇಕು, ಎಂಬ ಸಂಕೋಚ ಏನೋ ಅದು ನನಗೆ ತಿಳಿಯಲಿಲ್ಲ. ಒಂದು ವೇಳೆ ಆ ರೀತಿ ಇದ್ದರೆ, ಸ್ಪಷ್ಟವಾಗಿ ಹೇಳಿ. ನಾವೂ ನಿಮ್ಮ ಜೊತೆಯಲ್ಲಿದ್ದೇವೆ. ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಧಾನದ ಮುಖೇನ ಇದನ್ನು ಪರಿಹಾರ ಮಾಡುವುದಕ್ಕೆ ಪುನಃ ಪ್ರಯತ್ನ ಮಾಡಿ. ಇದರಿಂದ ಪರಿಹಾರ ಮಾಡುವುದಕ್ಕೆ ಸಾಧ್ಯ ಇದೆ. ಈ ವಿಚಾರದಲ್ಲಿ ಇಡೀ ಸದನ ನಿಮ್ಮ ಜೊತೆಯಲ್ಲಿದೆ. ಮಾನ್ಯ ಮುಖ್ಯ ಮಂತ್ರಿಗಳೆ, ಅಂತಹ ಒಂದು ಸ್ಕೋಪ್ ಕೊಟ್ಟದ್ದರಿಂದ ಇದು ಮುರಿದು ಹೋಗಿರಬಹುದು ಎನ್ನುವ ಅನುಮಾನ ಆಗುತ್ತದೆ. ಈ ಬಗ್ಗೆ ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಈ ಕಾವೇರಿ ಡಿಸ್‌ಪ್ಯೂಟ್ಸ್ ಬಗ್ಗೆಯೂ ಬರೆಯತ್ತಿರಬೇಕಾಗುತ್ತದೆ. Your Cabinet has to consider this and make our stand very quite categorical. You will have to impress not only Tamil Nadu but also the Government of India.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಾದ ಶ್ರೀ ಎಂ. ವೀರಪ್ಪ ಮೊಯಿಲಿಯವರು ಮತ್ತೆ ನಾನು ಸ್ಪಷ್ಟೀಕರಣ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಇದರಲ್ಲಿ ಮಾನ್ಯ ಮುಖ್ಯ

ಮಂತ್ರಿಗಳಿಗೂ ನನಗೂ ವ್ಯತ್ಯಾಸ ಏನೂ ಇಲ್ಲ. ನನ್ನ ಆಥವಾ ಅವರ ನಿಲುವಿನಲ್ಲಿ ವ್ಯತ್ಯಾಸ ಇಲ್ಲ. ಆಥವಾ ನನ್ನ ಇಲಾಖೆಯ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕಂತಹದ್ದರಲ್ಲಿ ಯಾವುದೇ ಹಸ್ತಕ್ಷೇಪ, ಕಡಿವಾಣ ನನಗೆ ಇಲ್ಲ ಎಂಬ ವಿಚಾರವನ್ನು ಇಲ್ಲಿ ಹೇಳುವುನಕ್ಕೆ ಇಷ್ಟಪಡುತ್ತೇನೆ. ಅವರೇ ಈ ಬಗ್ಗೆ ಜೂನ್ ೧೯೮೬ರಲ್ಲಿ ಪತ್ರ ಬರೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಬರೆದಿರುವ ಪತ್ರ. reads like this:

> " Karnataka feels that it is in opportune to constitute a tribunal at this juncture. Constitution of tribunal, if it is inevitable, should be done only after the formulation of the national water policy which is in the offing. "

ಪೂರ್ತಿ ಬೇಕಾದರೆ, ಅದನ್ನು ಸದನದಲ್ಲಿ ಮಂಡಿಸುತ್ತೇನೆ. ಆ ಪತ್ರದ ಲಾಸ್ಟ್ ಸೆಂಟನ್ಸ್ ಓದುತ್ತೇನೆ. ಇಫ್ ಇಟ್ ಈಸ್ ಇನ್ ಏವಿಟಿಬಲ್ ಅದರ ಜೊತೆಗೆ ನಾವು ಹೇಳುವುದನ್ನೆಲ್ಲಾ ಹೇಳಿದ್ದೇವೆ. Tamil Nadu's demand for constitution of tribunal before national water policy is formulated meant to stop development in other, States. ದೀರ್ಘವಾಗಿ ಹೇಳಿದ್ದೇವೆ. ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಇದರ ಜೊತೆಗೆ ಮತ್ತೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದೆಯೂ ಕೂಡ ನಮ್ಮವರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಈ ರಾಜ್ಯದಲ್ಲಿ ಹಿಂದೆ ಅಧಿಕಾರದಲ್ಲಿದ್ದಂತಹ ಯಾರೂ ಬಿಟ್ಟು ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವೊತ್ತಿನ ನಮ್ಮ ನೀತಿಯೂ ಕೂಡ ನೆರೆ ರಾಜ್ಯಗಳ ಜೊತೆಗೆ ಪರಸ್ಪರ ಸಹಕಾರವನ್ನು ಇಟ್ಟು ಕೊಳ್ಳಬೇಕು, ಪರಸ್ಪರ ಸೌಹಾರ್ದವನ್ನು ಇಟ್ಟುಕೊಳ್ಳಬೇಕೆಂಬುದೇ ಆಗಿದೆ. ಆದರೆ, ಆ ರೀತಿಯ ಸೌಹಾರ್ದ ಹಾಗೂ ಸಹಕಾರ ಸಭ್ಯತೆಯ ಚೌಕಟ್ಟಿನಲ್ಲಿ ಈ ರಾಜ್ಯಕ್ಕೆ ಹಾನಿಯನ್ನು ತರತಕ್ಕಂತಹ ಒಂದಂಶ ಕೂಡ ಸಾಧ್ಯವಾಗುವುದಿಲ್ಲ. ಸಾಧ್ಯವೇ ಇಲ್ಲ ಅದರ ಬಗ್ಗೆ ಅಷ್ಟೇ ಬಿಗಿಯಾದ ಧೋರಣೆಯನ್ನು ಈ ಸರ್ಕಾರ ತಳೆಯುತ್ತದೆ. ಇದನ್ನು ಬಲಹೀನತೆ ಎಂದು ಯಾರೂ ಭಾವಿಸಿಕೊಳ್ಳ ಬಾರದು. ಈ ರಾಜ್ಯದ ಹನಿ ಹನಿ ನೀರನ್ನೂ ಉಳಿಸತಕ್ಕಂತಹದ್ದರಲ್ಲಿ ಸರ್ವ ಪ್ರಯತ್ನವನ್ನು ಈ ಸರ್ಕಾರ ತನ್ನ ಸರ್ವಶಕ್ತಿಯನ್ನು ಉಪಯೋಗ ಮಾಡಿ ಕೆಲಸ ಮಾಡುತ್ತದೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ತುಮಕೂರು ಜಿಲ್ಲೆಯಲ್ಲಿ ಬರಗಾಲದ ಕಾಮಗಾರಿಗಳ ಬಾಕಿ ಇರುವ ಬಿಲ್‌ಗಳನ್ನು ಚುಕ್ತ ಮಾಡುವುದು

ಶ್ರೀ ಬಿ. ಲಕ್ಕಪ್ಪ.—ತುಮಕೂರು ಜಿಲ್ಲೆಯಲ್ಲಿ ಬರಗಾಲದ ಕಾಮಗಾರಿಗಳನ್ನು ನಡೆಸುವಾಗ ಬಾಕಿ ಇರುವ ಬಿಲ್‌ಗಳನ್ನು ಚುಕ್ತ ಮಾಡುವ ಬಗ್ಗೆ ನಾನು ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—೧-೪-೧೯೮೬ ರಿಂದ ೩೦-೬-೧೯೮೬ ರವರೆಗೆ ಕೇಂದ್ರ ಸರಕಾರದ ಸಹಾಯದಿಂದ ಬರಗಾಲ ಪರಿಹಾರ ಕಾಮಗಾರಿಗಳನ್ನು ಮುಂದುವರಿಸಿಕೊಂಡು ಹೋಗುತ್ತಾ, ಹಲವಾರು ಕೆಲಸಗಳನ್ನು ಜಿಲ್ಲಾಧಿಕಾರಿಗಳು ನಡೆಸಿಕೊಂಡು ಬಂದಿರುತ್ತಾರೆ. ಈ ಸಂದರ್ಭದಲ್ಲಿ ಸ್ವಲ್ಪ ಮಟ್ಟಿಗೆ ಕೆಲಸಗಳು ಮುಗಿದ ಬಳಿಕ ಬಿಲ್ಲುಗಳನ್ನು ಚುಕ್ತಾ ಮಾಡುವ ಅವಶ್ಯಕತೆ ಇರುವುದು ಸಹಜ. ಜೂನ್ ತಿಂಗಳ ಮೂರು ಮತ್ತು ನಾಲ್ಕನೇ ವಾರದಲ್ಲಿ ಆದ ಕೆಲಸಗಳ ಕೂಲಿ ಹಣವು ಬಾಕಿ ಇದ್ದಲ್ಲಿ ಅದನ್ನು ಚುಕ್ತಾ ಮಾಡಲು ಸರಕಾರವು ಬದ್ಧವಾಗಿದೆ. ಅಂತೆಯೇ ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ೨೮.೨೫ ಲಕ್ಷರೂಪಾಯಿಗಳ ಕೂಲಿ ಬಾಕಿ ಬಿಲ್ಲುಗಳು ಉಳಿದಿರುವ ಬಗ್ಗೆ ತುಮಕೂರು ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆ. ಈ ಹಣವನ್ನು ಬಿಡುಗಡೆ ಮಾಡಲು ಸರಕಾರವು ಈಗಾಗಲೇ ತೀರ್ಮಾನ ಕೈಗೊಂಡಿದೆ. ಸದ್ಯದಲ್ಲೇ ಈ ಹಣವು ಬಿಡುಗಡೆ ಆಗಲಿದ್ದು ಕೂಲಿಗಾರರ ವೇತನವನ್ನು ಅತೀ ಶೀಘ್ರದಲ್ಲಿ ಪಾವತಿ ಮಾಡಲಾಗುವುದು. ಈ ಕೆಲಸಗಳಲ್ಲಿ ಕೂಲಿ ಹೊರತುಪಡಿಸಿ ಇತರ ಬಾಕಿ ಬಿಲ್ಲುಗಳ ಬಗ್ಗೆ ಹೆಚ್ಚಿನ ಹೆಚ್ಚಿನ ಹಣದ ಅಗತ್ಯತೆ ಉಂಟಾದಲ್ಲಿ ಯೋಜನಾ ಕಾರ್ಯಕ್ರಮಗಳಾದ ಎನ್. ಆರ್. ಇ. ಪಿ., ಆರ್. ಎಲ್. ಇ. ಪಿ. ಮತ್ತು ಇನ್ನಿತರ ಇಲಾಖೆಗಳ ಸಾಮಾನ್ಯ ಆಯವ್ಯಯದ ಹಣದಿಂದ ಭರಿಸತಕ್ಕದೆಂದು ಕೂಡಾ ತೀರ್ಮಾನ ಕೈಗೊಳ್ಳಲಾಗಿದೆ.